
## 6. ಸ.ಹಿ.ಪ್ರಾ ಶಾಲೆ ಹೊಸಕಣಿಯ, ಶಿಕಾರಿಪುರ ತಾ.






### ಮೊದಲ ನುಡಿ

ಕರ್ನಾಟಕ ಸರ್ಕಾರವು ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಮಕ್ಕಳಿಗೆ ನಲಿಯುತ್ತಾ ಕಲಿಕೆಯನ್ನು ಕಲಿಯುವ ಉದ್ದೇಶವನ್ನು ಇಟ್ಟುಕೊಂಡು ನಲಿ–ಕಲಿ ಎಂಬ ವಿನೂತನ ಕಲಿಕಾ ವಿಧಾನವನ್ನು ಮೊದಲ ಬಾರಿಗೆ ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ತಾಲ್ಲೂಕಿನಲ್ಲಿ 1995–96 ರಲ್ಲಿ ಪ್ರಾಯೋಗಿಕವಾಗಿ ನಲಿ–ಕಲಿ ಪದ್ಧತಿಯನ್ನು ಕನ್ನಡ ಮಾಧ್ಯಮದಲ್ಲಿ ಜಾರಿಗೆ ತರಲಾಯಿತು. ನಂತರ ಹಂತ–ಹಂತವಾಗಿ 2009–10 ರಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1 ಮತ್ತು 2 ನೇ ತರಗತಿಗಳಿಗೆ ನಲಿ–ಕಲಿ ಪದ್ಧತಿಯನ್ನು ಜಾರಿಗೆ ತಂದಿತು. ನಂತರ 2010–11 ನೇ ಸಾಲಿನಲ್ಲಿ ರಾಜ್ಯಾದಂತ 3 ನೇ ತರಗತಿಗೆ ಈ ನಲಿ–ಕಲಿ ಪದ್ಧತಿಯನ್ನು ವಿಸ್ತರಿಸಲಾಯಿತು.

ರಾಜ್ಯದ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ 1 ರಿಂದ 3 ನೇ ತರಗತಿಗೆ ನಲಿ-ಕಲಿ ಭೋಧನಾ ಪದ್ದತಿಯನ್ನು ಅನುಷ್ಠಾನಗೊಳಿಸಿರುವುದರಿಂದ ಬಹುವರ್ಗ ಮತ್ತು ಬಹುಹಂತದ ತರಗತಿಯ ಪ್ರಕ್ರಿಯೆಯಾಗಿದ್ದು, ಈ ಪದ್ದತಿಯಲ್ಲಿ ಸ್ವ-ಕಲಿಕೆ, ಸ್ವ-ವೇಗದ ಕಲಿಕೆ, ಸಂತಸದ ಕಲಿಕೆ ಎಂಬ ಮೂರು ತತ್ವಗಳನ್ನು ಒಳಗೊಂಡಿರುವ ಈ ಪದ್ಧತಿಯು ರಾಜ್ಯದಲ್ಲಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಬುನಾದಿಯಾಗಿದೆ ಈ ನಲಿ-ಕಲಿ ಭೋಧನಾ ಪದ್ದತಿಯು ಒಂದು ಭೋಮಿಕೆಯಾಗಿದೆ.

## ನಲಿ-ಕಲಿ ಮತ್ತು ಶಿಕ್ಷಣ ಹಕ್ಕು ಕಾಯ್ದೆ- 2009

- ಕಲಿಕಾ ಪರಿಸರವು ಕಲಿಕೆಯನ್ನು ಉತ್ತೇಜಿಸಬೇಕು.
- ಮಗುವಿನ ಕಲಿಕೆಗೆ ಶಾಲೆಯ ಕೊಠಡಿಯಲ್ಲಿ ಮುಕ್ತ ವಾತಾವರಣ ಕಲ್ಪಿಸಬೇಕು.
- ಶಿಕ್ಷಣವು ಶಿಕ್ಷೆಯಿಂದ ಹೊರತಾಗಿರಬೇಕು ಮತ್ತು ಶಿಕ್ಷಕನ್ನು ಶಾಂತ ಮೂರ್ತಿಯಾಗಿರಬೇಕು.
- ಮಕ್ಕಳ ಕಲಿಕೆಯಲ್ಲಿ ಕಲಿಕಾ ಸಮಯದ ಸದ್ಬಳಕೆಯಾಗಬೆಕು.
- ಪಠ್ಯಪುಸ್ತಕಗಳೊಂದಿಗೆ ಪೂರಕ ಓದಿನ ಸಾಮಗ್ರಿಗಳು, ಕಾರ್ಡುಗಳ, ಅಭ್ಯಾಸ ಪುಸ್ತಕಗಳು, ವಾಚಕಗಳು ಜಿಲ್ಲಾ ಪರಿಚಯ ಮಾಹಿತಿಗಳು, ಕಲಿಕೋಪಕರಣಗಳ ಅನುವು ಮಾಡಿಕೊಡುವುದು.
- ಪ್ರತಿ ಮಗು ತನ್ನದೇ ಆದ ಕಲಿಕಾ ಸಮಯವನ್ನು ತೆಗೆದುಕೊಳ್ಳಲು ಹಕ್ಕುದಾರನಾಗಿರುತ್ತಾನೆ.
- ನಲಿ-ಕಲಿಯಲ್ಲಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ನಡೆಯುವಂತೆ ನೋಡಿಕೊಳ್ಳುವುದು.

**ನಲಿ-ಕಲಿ ವಿಧಾನದ ವಿಶೇಷತೆ.**

- ಬಹುವರ್ಗ * ಬಹುಹಂತದ ಕಲಿಕೆ. * ಕಲಿಕಾಂಶಗಳು * ಕಲಿಕಾ ಗೋಪುರ * ಮೈಲುಗಲ್ಲು * ಚಟುವಟಿಕೆಗಳನ್ನು ಒಳಗೊಂಡು ನಡೆಯುವ,ಪ್ರಕ್ರಿಯೆಯ ನಲಿ-ಕಲಿ ವಿಧಾನದ ವಿಶೇಷತೆಯಾಗಿದೆ.

### ಶಾಲೆಯ ಸಂಕ್ಷಿಪ್ತ ಮಾಹಿತಿ:-

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹೊಸಕಣಿಯ, ಈ ಶಾಲೆಯು ಶಿಕಾರಿಪುರ ತಾಲ್ಲೂಕು ಕೇಂದ್ರದಿಂದ ಸುಮಾರು 16 ಕಿಲೋ ಮೀಟರ್ ದೂರದಲ್ಲಿದೆ, ಇದು ಒಂದು ಚಿಕ್ಕ ಗ್ರಾಮವಾಗಿದ್ದು ಶಾಲೆಯ ಸುತ್ತ ಮುತ್ತ ಸುಂದರವಾದ ಪರಿಸರವನ್ನು ಹೊಂದಿದ್ದು ಶಾಲಾ ಕೈ ತೋಟ ಮತ್ತು ಶಾಲಾ ಮೈದಾನವು ಶುಚಿತ್ವದಿಂದ ಕೂಡಿದ್ದು ಮೂರು ಕೊಠಡಿಗಳನ್ನು ಹೊಂದಿದ್ದು ಒಂದರಿಂದ ಐದನೇ ತರಗತಿಯವರೆಗೆ ಒಟ್ಟು 43 ಮಕ್ಕಳು ಈ ಶಾಲೆಯಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದು ಇಬ್ಬರು ಸಿಕ್ಷಕರು ಮಕ್ಕಳ ಕಲಿಕೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಮಕ್ಕಳ ಬೌಧ್ಧಿಕ ಮಟ್ಟವನ್ನು ಹೆಚ್ಚಿಸಲು ಶ್ರಮವಹಿಸುತ್ತಿದ್ದೇವೆ.

ಇಲ್ಲಿ ಒಂದು ನಲಿ-ಕಲಿ ಘಟಕವನ್ನು ಹೊಂದಿದ್ದು ಒಂದನೇ ಏಣಿಯಲ್ಲಿ 13 ಮಕ್ಕಳು ಎರಡನೇ ಏಣಿಯಲ್ಲಿ 11 ಮಕ್ಕಳು ಮತ್ತು ಮೂರನೇ ಏಣಿಯಲ್ಲಿ 06 ಮಕ್ಕಳು ನಲಿ-ಕಲಿ ಭೋಧನಾ ಪದ್ದತಿಯಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ಶಾಲೆಯಲ್ಲಿ ಸಹಶಿಕ್ಷಕರಾಗಿ ಕಾರ್ಯವನ್ನು ನಿರ್ವಹಿಸುತ್ತಿರುವ ಶ್ರೀ ನೇತಾಜಿ ವಿ.ಟಿ. ಯವರು ಕನ್ನಡ, ಗಣಿತ, ಪರಿಸರ ಅಧ್ಯಾಯನ ಮತ್ತು ಇಂಗ್ಲೀಷ್ ವಿಷಯಗಳನ್ನು ನಿರ್ವಹಣೆ ಮಾಡುತ್ತಿದ್ದು ಶಿಕ್ಷಕರು ಮಕ್ಕಳ ಕಲಿಕೆಯ ಗುಣಮಟ್ಟವನ್ನು ತಿಳಿಯಲು ಇದು ಒಂದು ಅಂಶ ಸಹಕಾರಿಯಾಗಿದೆ ಎಂದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ.

ನಲಿ-ಕಲಿ ಆಶಯವಾದ ಸ್ವ ಕಲಿಕೆ, ಸ್ವ ವೇಗದ ಕಲಿಕೆ, ಸಂತಸದ ಕಲಿಕೆ ಎಂಬ ತತ್ವವನ್ನು ಅಳವಡಿಸಿಕೊಂಡು ಮಕ್ಕಳು ಚಟುವಟಿಕೆ ಆಧಾರಿತ ಮತ್ತು ಶಿಶು ಕೇಂದ್ರಿತ ಪದ್ದತಿಯಲ್ಲಿ ಪ್ರತಿದಿನ ಶಿಕ್ಷಕರು ಮತ್ತು

ಮಕ್ಕಳು ಸೇರಿ ನಿರ್ವಹಣೆ ಕಾರ್ಯವನ್ನು ನಮ್ಮ ನಲಿ-ಕಲಿ ಕೊಠಡಿಯಲ್ಲಿ ನಡೆಯುತ್ತದೆ. ಮತ್ತು ಈ ಪದ್ಧತಿಯು ಬಹುವರ್ಗ ಭೋಧನೆಯಾಗಿದೆ.

**ಕೊಠಡಿಯ ಸ್ಥಳಾವಕಾಶಕ್ಕೆ ನಲಿ-ಕಲಿ ಕೊಠಡಿಯ ಸಿದ್ದತೆಯ ಬಗ್ಗೆ ಪರಿಚಯ**

- **ಕೊಠಡಿಯ ಸಿದ್ದತೆ:-** ನಲಿ-ಕಲಿ ಘಟಕದ ಕೊಠಡಿಯು ಉತ್ತಮವಾದ ಗಾಳಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಹೊಂದಿದ್ದು, ನೆಲಕ್ಕೆ ಟೈಲ್ಸ್ ಹಾಕಿದ್ದು ನಲಿ-ಕಲಿಯಲ್ಲಿರುವ ಒಟ್ಟು 30 ಮಕ್ಕಳು ಕೂರಲು ಉತ್ತಮವಾದ ಸ್ಥಳಾವಕಾಶ ಹೊಂದಿದೆ.
- **ಕಲಿಕಾ ತಟ್ಟೆಗಳು:-** ನಲಿ-ಕಲಿ ಘಟಕದಲ್ಲಿ ಪ್ರಮುಖವಾಗಿ ಐದು ತಟ್ಟೆಗಳನ್ನು ನೆಲದ ಮೇಲೆ ಬರೆಯಲಾಗಿದ್ದು ಈ ಐದು ತಟ್ಟೆಗಳು ನಲಿ-ಕಲಿ ಪದ್ಧತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.
- **ಪ್ರಗತಿ ನೋಟ:-** ನಮ್ಮ ನಲಿ-ಕಲಿ ಘಟಕದಲ್ಲಿ ಮೂರು ಏಣಿಗಳಿಗೆ ತರಗತಿವಾರು , ವಿಷಯವಾರು ಪ್ರಗತಿ ನೋಟಗಳನ್ನು ಮಕ್ಕಳಿಗೆ ಕೈಗೆ ನಿಲುಕುವ ರೀತಿಯಲ್ಲಿ ರ್‍ಯಾಕ್ ಪಕ್ಕದಲ್ಲಿ ಇಡಲಾಗಿದ್ದು ಮಕ್ಕಳಿಗೆ ಮೈಲುಗಳ್ಳು ಮತ್ತು ಮೆಟ್ಟಿಲು ಸಂಖ್ಯೆಯನ್ನು ಅಥವಾ ಲೋಗವನ್ನು ನೋಡಿ ಕಾರ್ಡುಗಳನ್ನು ಎತ್ತಿಕೊಂಡು ತಟ್ಟೆಯಲ್ಲಿ ಕೂತು ಕಲಿಕೆಯನ್ನು ಮುಂದುವರಿಸಿ ನಂತರ ಶಿಕ್ಷಕರು ದೃಢೀಕರಿಸಿದ ನಂತರ ಮಗು ತನ್ನ ಪ್ರಗತಿ ನೋಟದ ತನ್ನ ಹೆಸರ ಮುಂದೆ ರೈಟ್ ಹಾಕಿ ನಿರಂತರ ಮೌಲ್ಯಮಾಪನಕ್ಕೆ ಒಳಪಡುತ್ತದೆ.
- **ಕಲಿಕೋಪಕರಣಗಳು:-** ನಲಿ-ಕಲಿ ಭೋಧನಾ ಪದ್ಧತಿಯು ಯಶಸ್ವಿಯಾಗಬೇಕಾದರೆ ಮತ್ತು ಮಕ್ಕಳು ಸಂತೋಷವಾಗಿ ಕಲಿಯಬೇಕಾದರೆ ಮುಖ್ಯವಾಗಿ ಕಲಿಕೋಪಕರಣಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ, ಆದ್ದರಿಂದ ನಮ್ಮ ನಲಿ-ಕಲಿ ಘಟಕದಲ್ಲಿ ವಿಷಯವಾರು, ತರಗತಿವಾರು, ಮೈಲುಗಲ್ಲುವಾರು ಜೋಡಿಸಲಾಗಿದ್ದು ಮಕ್ಕಳ ಕೈಗೆ ಸಿಗುವ ರೀತಿಯಲ್ಲಿ ಇಡಲಾಗಿದೆ.
- **ಕಾರ್ಡುಗಳ ಜೋಡಣೆ:-** ನಮ್ಮ ನಲಿ-ಕಲಿ ಘಟಕದಲ್ಲಿ ಮೂರು ರ್‍ಯಾಕ್‌ಗಳನ್ನು ಹೊಂದಿದ್ದು ಮೂರು ಏಣಿಗಳಲ್ಲಿ ತರಗತಿವಾರು ವಿಷಯವಾರು ಕಾರ್ಡುಗಳನ್ನು ಜೋಡಿಸಲಾಗಿದ್ದು ಮಕ್ಕಳಿಗೆ ಮೈಲುಗಲ್ಲುಗಳನ್ನು ನೋಡಿಕೊಂಡು ಕಾರ್ಡುಗಳನ್ನು ಎತ್ತಿಕೊಳಲು ಅನುಕೂಲವಾಗಿದೆ.
- **ವಾಚಕಗಳು:-** ತರಗತಿವಾರು ವಿಷಯವಾರು ವಾಚಕಗಳನ್ನು ಪ್ರತ್ಯೇಕವಾಗಿ ಜೋಡಿಸಲಾಗಿದ್ದು ಮಕ್ಕಳ ಕೈಗೆ ಸಿಗುವ ರೀತಿಯಲ್ಲಿ ನೇತು ಹಾಕಲಾಗಿದೆ.
- **ವಾಲ್ ಸ್ಲೇಟ್:-** ನಲಿ-ಕಲಿ ಕೊಠಡಿಯ ಸ್ಥಲಾವಕಾಶಕ್ಕೆ ಅನುಗುಣವಾಗಿ ಮತ್ತು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ವಾಲ್ ಸ್ಲೇಟ್‌ನ್ನು ಅಳವಡಿಸಿಕೊಂಡಿದ್ದು ಮಕ್ಕಳು ವಾಲ್ ಸ್ಲೇಟ್‌ನ್ನು ಉಪಯೋಗಿಸುತ್ತಾರೆ.
- **ಕಲಿಕಾ ಚಪ್ಪರ:-** ನಮ್ಮ ನಲಿ-ಕಲಿ ಘಟಕದಲ್ಲಿ ಕಲಿಕಾ ಚಪ್ಪರವು ತುಂಬಾ ಅಚ್ಚುಕಟ್ಟಾಗಿದ್ದು ಮಕ್ಕಳು ತಾವು ಬರೆದಿರುವ ಪದಗಳು ಮತ್ತು ಒತ್ತು ಚಿತ್ರಗಳನ್ನು ಹಾಗೂ ಎಲೆಗಳಿಂದ ವಿವಿಧ ರೀತಿಯ ಆಕಾರಗಳನ್ನು ಮಾಡಿ ಕಲಿಕಾ ಚಪ್ಪರದಲ್ಲಿ ಹಾಕುತ್ತಾರೆ.
- **ಗೋಡೆ ಬರಹ:-** ಮೂರು ಏಣಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಗೋಡೆ ಬರಹದಲ್ಲಿ ಬರೆಯಲಾಗಿದ್ದು ಮಕ್ಕಳು ಪ್ರತಿ ನಿತ್ಯ ಅದನ್ನು ನೋಡಿ ಮನನ ಮಾಡಿಕೊಳ್ಳಲು ಅನುಕೂಲವಾಗಿದೆ.
- **ಹವಮಾನ ನಕ್ಷೆ:-** ಒಂದು ದಿನದಲ್ಲಿ ಪರಿಸರದಲ್ಲಾಗುವ ಬದಲಾವಣೆಯನ್ನು ಮಕ್ಕಳು ವೀಕ್ಷಿಸಿ ಹಿರಿಯ ವಿದ್ಯಾರ್ಥಿಗಳ ಸಹಾಯದಿಂದ ಹವಾಮಾನ ನಕ್ಷೆಯಲ್ಲಿ ಬೆಳಗ್ಗೆ ಮತ್ತು ಸಂಜೆ ಗುರುತನ್ನು ಹಾಕುತ್ತಾರೆ ಮತ್ತು ತಿಂಗಳ ಕೊನೆಯಲ್ಲಿ ಶಿಕ್ಷಕರು ಮತ್ತು ಮಕ್ಕಳು ಸೇರಿ ಕ್ರೋಢೀಕರಣ ಮಾಡಿ ನಂತರ ವಿಶ್ಲೇಷಣೆ ಮಾಡುತ್ತೇವೆ. ಇದರಿಂದ ಮಕ್ಕಳಿಗೆ ಪರಿಸರದಲ್ಲಿ ಆಗುವ ಬದಲಾವಣೆಯನ್ನು ತಿಳಿಯಲು ಅನುಕೂಲವಾಗಿದೆ.
- **ಸಿ. ಪಿ. ಎಫ್ ನಿರ್ವಹಣೆ:-** ನಮ್ಮ ಶಾಲೆಯಲ್ಲಿ ಸಿ. ಪಿ. ಎಫ್. ಹಾಳೆಯ ಬದಲಾಗಿ ನೋಟ್ ಪುಸ್ತಕಗಳನ್ನು ಇಟ್ಟಿದ್ದು ಮಕ್ಕಳು ಕಲಿಕಾ ದಾಖಲೀಕರಣ ಮತ್ತು ದೃಢೀಕರಣ ಮಾಡಲು ಅನುಕೂಲವಗಿದೆ,
- **ಪೊಪೆಟ್ ಶೋ:-** ನಲಿ-ಕಲಿ ಭೋಧನಾ ಪದ್ಧತಿಯಲ್ಲಿ ಪೊಪೆಟ್ ಶೋ ಅಳವಡಿಸಿಕೊಂಡು ಇದಕ್ಕ ಬೇಕಾದ ಪೊಪೆಟ್ ಮತ್ತು ಸ್ಕ್ರೀನನ್ನು ಬಳಸಿ ಮಕ್ಕಳ ಮುಂದೆ ಪ್ರದರ್ಶನ ಮಾಡಿದಾಗ ಮಕ್ಕಳು ತುಂಬಾ ಆಸಕ್ತಿಯಿಂದ ವೀಕ್ಷಿಸಿ ತುಂಬಾ ಸಂತೋಷವನ್ನು ವ್ಯಕ್ತಪಡಿಸುತ್ತಾರೆ.
- **ಅಭ್ಯಾಸ ಪುಸ್ತಕ:-** ಎಲ್ಲಾ ಮಕ್ಕಳಿಗೂ ಅಭ್ಯಾಸ ಪುಸ್ತಕವಿದ್ದು ಮಕ್ಕಳು ಅದನ್ನು ಸೂಕ್ತವಾದ ರೀತಿಯಲ್ಲಿ ನಿರ್ವಹಿಸಿ ಶಿಕ್ಷಕರ ಸಹಿ ಮತ್ತು ದಿನಾಂಕವನ್ನು ಪಡೆಯುತ್ತಿದ್ದಾರೆ.

❖ **ನಲಿ–ಕಲಿ ಡೈರಿ:–** ಶಿಕ್ಷಕರು ಪ್ರತಿದಿನ ಮಕ್ಕಳ ಕಲಿಕಾ ಪ್ರಗತಿಯನ್ನು ದೃಢೀಕರಿಸಿದ ನಂತರ ಮಕ್ಕಳು ಪ್ರಗತಿ ನೋಟದಲ್ಲಿ ಗುರುತು ಹಾಕುತ್ತಾರೆ ಮತ್ತು ಶಿಕ್ಷಕರು ತಮ್ಮ ಡೈರಿಯಲ್ಲಿ ನಮೂದಿಸಿಕೊಳ್ಳುವುದರಿಂದ ಮಕ್ಕಳ ಪ್ರಗತಿಯ ಬಗ್ಗೆ ತಿಳಿಯಬಹುದಾಗಿದೆ.

❖ **ಕಲಿಕಾ ತಟ್ಟೆಗಳ ನಿರ್ವಹಣೆ:–** ನಲಿ–ಕಲಿ ಘಟಕದಲ್ಲಿ ಮೂರು ತರಗತಿಗಳಿಗೂ ಅನುಗುಣವಾಗಿ ಪ್ರತಿಯೊಂದು ವಿಷಯಗಳಿಗೂ 5+1=6 ತಟ್ಟೆಗಳನ್ನು ನಿರ್ವಹಣೆ ಮಾಡಲಾಗುತ್ತದೆ. ಇದನ್ನು ಮಕ್ಕಳು ಪ್ರತಿ ದಿನ ನಿರ್ವಹಿಸುತ್ತಾರೆ.

2018–19 ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ನಲಿ–ಕಲಿ ಭೋಧನಾ ಪದ್ದತಿಯ ವಿಧಾನವನ್ನು ಕನ್ನಡ ಶಾಲೆಗಳಲ್ಲಿ ಹೇಗೆ ನಡೆಯುತ್ತದೆ ಎಂಬುದನ್ನು ಅರಿಯಲು ಶಿಕಾರಿಪುರ ತಾಲ್ಲೂಕು ಕ್ಷೇತ್ರ ಸಮನ್ವಯಾಧಿಕಾರಿಗಳಾದ ಮಾನ್ಯ ಶ್ರೀ ಟಿ.ಎಸ್ ಮುರಳಿಧರ್ ಸರ್ ರವರು ನಲಿ–ಕಲಿ ಅವಲೋಕನ ತಂಡವನ್ನು ರಚಿಸಿದ್ದರು ಅದರ ಅನ್ವಯ ನಮ್ಮ ಶಾಲೆಗೆ ದಿನಾಂಕ: 06/03/2018 ರಂದು ಸಾಲೂರು ಸಿ.ಆರ್.ಪಿ ಯಾದ ಶ್ರೀ ಚಂದ್ರಶೇಖರ ರವರು ಭೇಟಿ ನೀಡಿ ಭಾಷಾ ವಿಷಯದ ನಲಿ–ಕಲಿ ಪಾಠ ವೀಕ್ಷಣೆ ಮಾಡಿದರು. ಮಕ್ಕಳ ಸ್ವತಃ ಪ್ರಗತಿ ನೋಟವನ್ನು ನೋಡಿ ಕಾರ್ಡುಗಳನ್ನು ಮತ್ತು ಕಲಿಕಾ ಸಾಮಾಗ್ರಿಗಳನ್ನು ಎತ್ತುಕೊಂಡು ತಟ್ಟೆಯಲ್ಲಿ ಕೂರುವುದನ್ನು ಖಚಿತಪಡಿಸಿಕೊಂಡರು, ಶಿಕ್ಷಕರು ತಟ್ಟೆಯಲ್ಲಿ ಹೇಗೆ ಕಾರ್ಯವನ್ನು ನಿರ್ವಹಿಸುತ್ತಾರೆ ಎಂಬುದನ್ನು ವೀಕ್ಷಣೆ ಮಾಡಿದರು. ಕೊನೆಯ 10 ನಿಮಿಷದಲ್ಲಿ ನಡೆಯುವ ಮೌಲ್ಯಮಾಪನ ಕ್ರಿಯೆಯನ್ನು ವೀಕ್ಷಣೆ ಮಾಡಿದರು. ತದನಂತರ ಹವಾಮಾನ ನಕ್ಷೆಯ ಬಗ್ಗೆ ಚರ್ಚಿಸಲಾಯಿತು. ಅವರ ಅಭಿಪ್ರಾಯದಂತೆ ನಲಿ–ಕಲಿ ಬೊಧನಾ ಪ್ರಕ್ರಿಯೆ ಉತ್ತಮವಾಗಿ ನಡೆಯುತ್ತದೆ ಎಂಬುದನ್ನು ತಿಳಿಸಿದರು.

ದಿನಾಂಕ:21/12/2018 ರಂದು ಮೈಕ್ರೋ ಅಧ್ಯಯನಕ್ಕಾಗಿ ಸೊರಬ ತಾಲ್ಲೂಕಿನ ಬಿ.ಆರ್.ಸಿ.ಯ ಬಿ.ಆರ್.ಪಿಯಾದ ಮಾನ್ಯ ಶ್ರೀ ಶಿವಮೂರ್ತಿ ಕೆ.ಎಂ ರವರು ಬೆಳಗ್ಗೆ 8 ಗಂಟೆ 30 ನಿಮಿಷಕ್ಕೆ ಶಾಲೆಗೆ ಆಗಮಿಸಿ ಶಾಲಾ ಪರಿಸರವನ್ನು ಮೊದಲಿಗೆ ವೀಕ್ಷಣೆ ಮಾಡಿ ನಂತರ ಮಕ್ಕಳ ಆ ದಿನದ ಹಾಜರಾತಿಯನ್ನು ಪಡೆದುಕೊಂಡು ಮಕ್ಕಳ ಪ್ರಗತಿ ನೋಟದಲ್ಲಿ ಮಕ್ಕಳ ಪ್ರಗತಿಯನ್ನು ಬರೆದುಕೊಂಡು ನಲಿ–ಕಲಿ ಕೊಠಡಿಗೆ ಬಂದು ಕನ್ನಡ ವಿಷಯದ ಅವಧಿಯನ್ನು ವೀಕ್ಷಣೆ ಮಾಡಿ ಮಕ್ಕಳ ಕಲಿಕಾ ಮಟ್ಟವನ್ನು ಮತ್ತು ನಲಿ–ಕಲಿ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದನ್ನು ವೀಕ್ಷಿಸಿ ಕೆಲವು ಸಲಹೆಗಳನ್ನು ನೀಡಿದರು. ಶಿಕ್ಷಕರ ಡೈರಿ ಮತ್ತು ಪ್ರಗತಿ ನೋಟಕ್ಕೆ ತಾಳೆ ಮಾಡಿನೋಡಿ ಸರಿ ಇರುವುದನ್ನು ಖಚಿತಪಡಿಸಿಕೊಂಡು. ಹೀಗೆ ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳ ವೀಕ್ಷಣೆ ಮಾಡಿ ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ನಲಿ–ಕಲಿ ಕೊಠಡಿಯಲ್ಲಿ ಇರುವುದನ್ನು ಕಂಡರು. ಕಾರ್ಡುಗಳ ಜೋಡಣ ಕಲಿಕಾ ಸಾಮಾಗ್ರಿಗಳ ಜೋಡಣೆ, ವಾಚಕಗಳ ಜೋಡಣೆ, ಪೋಪೆಟ್ ಮತ್ತು ಸ್ಕ್ರೀನ್ ಬಗ್ಗೆ ಕಲಿಕಾ ಚಪ್ಪರದ ಬಗ್ಗೆ ವಾಲ್ ಸ್ಲೇಟ್ ಬಗ್ಗೆ ಕೊಠಡಿಯ ಗೋಡೆ ಬರಹದ ಬಗ್ಗೆ 1ನೇ ಏಣಿ. 2ನೇ ಏಣಿ, 3ನೇ ಏಣಿಯ ಪ್ರಗತಿನೋಟದ ಜೋಡಣೆಯ ಬಗ್ಗೆ. ಹಾಗೂ ಹವಾಮಾನ ನಕ್ಷೆಯ ಬಗ್ಗೆ ಹಾಗೂ ಕೊಠಡಿಯ ಸ್ವಚ್ಚತೆಯ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಅದೇ ರೀತಿ ಸುಗಮಕಾರರು ಅಭ್ಯಾಸ ಪುಸ್ತಕವನ್ನು ಧೃಢೀಕರಿಸಿ, ದಿನಾಂಕವನ್ನು ನಮೂಧಿಸುವಂತೆ ತಿಳಿಸಿದರು ಅದನ್ನು ಈಗ ನಮ್ಮ ನಲಿ–ಕಲಿ ಘಟಕದಲ್ಲಿ ಅಳವಡಿಸಿಕೊಳ್ಳಲಾಗಿದೆ.

ದಿನಾಂಕ:08/03/2019 ರಂದು ಶಿಕಾರಿಪುರ ತಾಲ್ಲೂಕಿನ ಬಿ.ಆರ್.ಸಿಯ ಸಮನ್ವಯ(ಬಿ.ಆರ್.ಒ) ಅಧಿಕಾರಿಯಾದ ಮಾನ್ಯ ಶ್ರೀ ಟಿ.ಎಸ್ ಮುರಳೀಧರ್ ಸರ್ ಮತ್ತು ಕಪ್ಪನಹಳ್ಳಿ ಕ್ಲಸ್ಟರಿನ ಸಿ.ಆರ್.ಪಿಯಾದ ಶ್ರೀ ಚಂದ್ರಪ್ಪರ ಜೊತೆ ಶಾಲೆಗೆ ಭೇಟಿ ನೀಡಿ ಶಾಲಾ ಪರಿಸರದ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು. ತದನಂತರ ನಲಿ–ಕಲಿ ಕೊಠಡಿಗೆ ಭೇಟಿ ನೀಡಿದರು. ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳು ಕಲಿಕೆಯಲ್ಲಿ ತೊಡಗಿರುವುದನ್ನು ಮತ್ತು ಸುಗಮಕಾರರ ಕಾರ್ಯವನ್ನು 30 ನಿಮಿಷ ವೀಕ್ಷಣೆ ಮಾಡಿದರು. ನಂತರ ಪ್ರದೀಪ ಎಂ ಎಂಬ 2 ನೇ ತರಗತಿಯ ವಿದ್ಯಾರ್ಥಿಯ ಕನ್ನಡ ವಿಷಯ ಪಠ್ಯಪುಸ್ತಕ ಮತ್ತು ಶಿಕ್ಷಕರ

ಡೈರಿಯನ್ನು ತಾಳೆ ಮಾಡಿ ನೋಡಿದಾಗ ಮಗುವಿನ ಕಲಿಕಾ ಮಟ್ಟವನ್ನು ನೋಡಿದಾಗ ಆ ಮಗುವಿನ ಕಲಿಕೆಯಲ್ಲಿ ಕುಂಠಿತವಾಗಿರುವುದನ್ನು ಚರ್ಚಿಸಿದರು ಆ ಮಗು ನಿಧಾನಗತಿಯ ಕಲಿಕೆಯ ಮಗುವಾಗಿದ್ದು ಆ ಮಗುವಿನ ಕಲಿಕೆಯ ಬಗ್ಗೆ ಹೆಚ್ಚು ಒತ್ತು ಕೊಟ್ಟು ಕಲಿಕೆಯಲ್ಲಿ ಆಸಕ್ತಿ ಮೂಡಿಸಲು ತಿಳಿಸಿದರು ತದನಂತರ ಹವಾಮಾನ ನಕ್ಷಯಯನು ಗುರುತಿಸುವಾಗ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ವಾತಾವರಣದಲ್ಲಿ ಆಯಾ ದಿನದಲ್ಲಿ ಆಗುವ ಬದಲಾವಣೆಯನ್ನು ವೀಕ್ಷಣೆ ಮಾಡಿ ನಕ್ಷೆಯಲ್ಲಿ ನಮೂದಿಸುವಂತೆ ತಿಳಿಸಿದರು ಈ ಸಂದರ್ಭದಲ್ಲಿ ಕಪ್ಪನಹಳ್ಳಿ ಸಿ.ಆರ್.ಪಿ ಯಾದ ಶ್ರೀ ಚಂದ್ರಪ್ಪನವರು ಹಾಜರಿದ್ದರು. ನಂತರ ಮಾನ್ಯ ಶ್ರೀ ಮುರಳೀಧರ್ ಸರ್ ಅವರ ಅಭಿಪ್ರಾಯದಂತೆ ನಲಿ–ಕಲಿ ಘಟಕದಲ್ಲಿ ನೇತಾಜಿ ಸಹ ಶಿಕ್ಷಕರು ನಲಿ–ಕಲಿ ಆಶಯದಂತೆ ಕಾರ್ಯ ನಿರ್ವಹಿಸುತ್ತಿದ್ದು ಪ್ರಗತಿನೋಟ ಮತ್ತು ದಿನಚರಿ ತಾಳೆಯಿರುತ್ತದೆ. ಹಾಗೂ ಹವಾಮಾನ ನಕ್ಷೆ ವಿಶ್ಲೇಷಿಸಲು ಸಲಹೆ ನೀಡಿದ್ದಾರೆ ಮತ್ತು ಮುಖ್ಯ ಶಿಕ್ಷಕರಾದ ಜಿ. ಕುಮಾರಪ್ಪ ಸರ್ ಮತ್ತು ಸಹ ಶಿಕ್ಷಕರಾದ ನೇತಾಜಿ ವಿ.ಟಿ ಸರ್‌ರವರಿಗೆ ವಂದನೆಗಳನ್ನು ತಿಳಿಸಿ ಇದೇ ರೀತಿ ಮಕ್ಕಳ ಕಲಿಕೆಯನ್ನು ಮುಂದುವರೆಸಲು ತಿಳಿಸಿದರು.

ದಿನಾಂಕ:31/03/2019 ರಂದು ಬಿ.ಆರ್.ಸಿಯ ಬಿ.ಆರ್.ಪಿಯಾದ ಶ್ರೀ ನಾಗಾನಾಯ್ಕ ಮತ್ತು ಹೊಸೂರು ಕ್ಲಸ್ಟರಿನ ಸಿ.ಆರ್.ಪಿಯಾದ ನಾಗರಾಜನಾಯ್ಕ ಅವರು ನಲಿ–ಕಲಿ ಮೈಕ್ರೋ ಅಧ್ಯಯನಕ್ಕಾಗಿ ನಮ್ಮ ಶಾಲೆಗೆ ಭೇಟಿ ನೀಡಿ ನಲಿ–ಕಲಿ ಕೊಠಡಿಯನ್ನು ವೀಕ್ಷಣೆ ಮಾಡಿ ಕೆಲವು ಮಕ್ಕಳಿಗೆ ಪಠ್ಯಪುಸ್ತಕ ಮತ್ತು ಕಾರ್ಡಗಳನ್ನು ಶಿಕ್ಷಕರು ಧೃಡೀಕರಿಸಿದ ನಂತರ ಏನು ಮಾಡಬೇಕು ಎಂದು ಕೇಳಿದಾಗ ಮಕ್ಕಳು ಪ್ರಗತಿ ನೋಟದಲ್ಲಿ

✓ ಗುರುತನ್ನು ಹಾಕಬೇಕು ಎಂದು ಮಕ್ಕಳು ಹೇಳಿದರು ನಂತರ ಕೊಠಡಿಯನ್ನು ವೀಕ್ಷಣೆ ಮಾಡಿ ನಲಿ–ಕಲಿ ಕೊಠಡಿಯ ಸ್ವಚ್ಛತೆ ಮತ್ತು ಮಕ್ಕಳ ಕಲಿಕೆ ಹಾಗೂ ಕಲಿಕಾ ಸಾಮಾಗ್ರಿಗಳ ಜೋಡಣೆ ಬಗ್ಗೆ ತುಂಬಾ ಚನ್ನಾಗಿದೆ ಎಂದು ಖುಷಿಪಟ್ಟರು.

ಒಟ್ಟಾರೆ ನಲಿ–ಕಲಿ ಮ್ಯಾಕ್ರೋ ಮತ್ತು ಮೈಕ್ರೋ ಅಧ್ಯಯನದಿಂದ ಶಿಕ್ಷಕರು ಮಾಡುವ ಕೆಲವು ತಪ್ಪುಗಳನ್ನು ತಿದ್ದಿಕೊಳ್ಳಲು ಒಂದು ಒಳ್ಳೆಯ ಅವಕಾಶವಾಗಿದ್ದು ಉತ್ತಮ ಕಲಿಕೆಗಾಗಿ ಇಂತಹ ಒಂದು ಅವಲೋಕನ ಅಗತ್ಯವಿರುತ್ತದೆ. ಇದರಿಂದ ಮಕ್ಕಳಲ್ಲಿ ಕಲಿಕೆಯನ್ನು ಉತ್ತಮ ಪಡಿಸಲು ಸಹಕಾರಿಯಾಗಿದೆ. ಪೋಷಕರಲ್ಲಿ ನಲಿ–ಕಲಿ ವಿಧಾನದ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿ ಬಂದಿದೆ. ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ಯಲ್ಲಪ್ಪ ಬಿನ್ ದೊಡ್ಡಬಸಪ್ಪ ಇವರ ನೇತೃತ್ವದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಸಹಾಯದಿಂದ ಗೋಡೆಬರಹ ಬರೆಯಲಾಗಿದ್ದು ತುಂಬಾ ಚನ್ನಾಗಿದೆ. ಮತ್ತು ಬೀರಪ್ಪ ಬಿನ್ ಹನುಮಂತಪ್ಪ ಎಸ್.ಡಿ.ಎಂ.ಸಿ ಸದಸ್ಯರು ಇವರು ಸ್ವಂತ ಹಣ 7,000 ರೂಪಾಯಿಗಳನ್ನು ಖರ್ಚು ಮಾಡಿ ಒಂದು ಕಬ್ಬಿಣದ ರ್‍ಯಾಕನ್ನು ಮಾಡಿಸಿಕೊಟ್ಟಿದ್ದಾರೆ. ಈ ನಲಿ–ಕಲಿ ಕೊಠಡಿ ಸುಂದರವಾಗಿ ಮತ್ತು ಸ್ವಚ್ಛವಾಗಿಡಲು ಸಹಕರಿಸಿದ ನನ್ನ ವಿಧ್ಯಾರ್ಥಿಗಳಿಗೆ ಮತ್ತು ಈ ಶಾಲೆಯ ಮುಖ್ಯ ಶಿಕ್ಷಕರಾದ ಜಿ.ಕುಮಾರಪ್ಪ ಸರ್ ಇವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನಲಿ–ಕಲಿ ಯಶೋಗಾಥೆಯಲ್ಲಿ ನಮ್ಮ ಶಾಲೆಯು 2018–19 ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಉತ್ತಮ ನಲಿ–ಕಲಿ ಘಟಕ ಎಂದು ಆಯ್ಕೆ ಮಾಡಿ ದಿನಾಂಕ: 05–09–2019 ರಂದು ನಡೆದ ಶಿಕ್ಷಕರ ದಿನಾಚರಣೆಯ ಸಮಾರಂಭದ ವೇದಿಕೆಯಲ್ಲಿ ಪ್ರೋತ್ಸಾಹ ಧನವಾಗಿ ನಮ್ಮ ಶಾಲೆಗೆ 5000 ರೂಪಾಯಿಗಳನ್ನು ನೀಡಲಾಯಿತು. ಈ ಯಶಸ್ಸನ್ನು ಪಡೆಯಲು ಕಾರಣಕರ್ತರಾಗಿರುವ ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಾನ್ಯ ಶ್ರೀ ಸಿದ್ದಪ್ಪನವರಿಗೆ ಮತ್ತು ಶಿಕಾರಿಪುರ ಶಾಲೆಗಳಲ್ಲಿ ನಲಿ–ಕಲಿ ಘಟಕಗಳನ್ನು ಉತ್ತಮ ಪಡಿಸಲು ಹಗಲಿರುಳು ದುಡಿಯುತ್ತಿರುವ ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಮಾನ್ಯ ಶ್ರೀ ಟಿ. ಎಸ್. ಮುರಳಿಧರ್ ಸರ್ ಇವರ ಮಾರ್ಗದರ್ಶನದಂತೆ ನಾವು ನಡೆದುಕೊಂಡಿರುವುದರಿಂದ ನಲಿ–ಕಲಿ ಯಶೋಗಾಥಿಯನ್ನು ಸಾಧಿಸಲು ಸಾದ್ಯವಾಯಿತು ಎಂದು ಹರ್ಷಿಸುತ್ತೇವೆ. ಮತ್ತು ಜಿಲ್ಲಾ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಇವರಿಗೆ ನಮ್ಮ ಶಾಲೆಯ ಶಿಕ್ಷಕ ವೃಂದದ ಪರವಾಗಿ ಎಸ್.ಡಿ.ಎಂ.ಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪೋಷಕರು, ಜನಪ್ರತಿನಿಧಿಗಳು ಮತ್ತು ಗ್ರಾಮಸ್ಥರುಹಾಗೂ ವಿಶೇಷವಾಗಿ ನಮ್ಮ ಶಾಲೆಯ ಮುದ್ದು ಮಕ್ಕಳ ಪರವಾಗಿ ಅನಂತ ಅನಂತ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

2019–20 ರಲ್ಲಿ ಉತ್ತಮ ನಲಿ–ಕಲಿ ಘಟಕ ಎಂದು ಪ್ರೋತ್ಸಾಹ ಧನವನ್ನು ನೀಡಿದ್ದು ಆ ಹಣವನ್ನು ಶಾಲೆಯ ನಲಿ–ಕಲಿ ಘಟಕಕ್ಕೆ ಬೇಕಾದ ಕಲಿಕೋಪಕರಣಗಳಿಗೆ ಮತ್ತು ನಲಿ–ಕಲಿ ಕೊಠಡಿಯ ಹೊರಭಾಗದಲ್ಲಿ ಬಣ್ಣವನ್ನು ಹೊಡೆದು ಸುಂದರವಾದ ಚಿತ್ರಗಳನ್ನು ಬರೆಯಲು ಉಪಯೋಗಿಸಲಾಗುತ್ತದೆ. 2019–20 ನೇ ಶೈಕ್ಷಣಿಕ ವರ್ಷದಲ್ಲಿ ಶಿಕಾರಿಪುರಕ್ಕೆ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ ಆಗಮಿಸಿರುವ ಮಾನ್ಯ ಶ್ರೀ ಕೆ. ಆರ್. ಉಮಾಮಹೇಶ್ ಸರ್ ಮತ್ತು ಕ್ಷೇತ್ರ ಸಮನ್ವಯ ಆಧಿಕಾರಿಗಳಾದ ಮಾನ್ಯ ಶ್ರೀ ಟಿ. ಎಸ್. ಮುರಳಿಧರ ಸರ್ ಇವರ ಆಶಯದಂತೆ ಪ್ರತಿ ಮಗುವಿಗೂ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಯಶಸ್ಸನ್ನು ಸಾಧಿಸಲು ಹೊರಟಿರುವ ಇವರ ಜೊತೆ ನಾವು ಭಾಗಿಗಳಾಗಿ ಇವರು ನೀಡುವ ಮಾರ್ಗದರ್ಶನ ಮತ್ತು ಸೂಕ್ತ ಸಲಹೆಗಳನ್ನು ಪಡೆದು ಪ್ರತಿ ಮಗುವಿಗೂ ಗುಣಾತ್ಮಕ ಶಿಕ್ಷಣವನ್ನು ನೀಡಲು ಶ್ರಮಿಸುತ್ತೇವೆ ಎಂದು ಈ ಮೂಲಕ ಹಂಚಿಕೊಳ್ಳಲು ಇಚ್ಚಿಸುತ್ತೇವೆ.

### ನಲಿ–ಕಲಿ ಕೊಠಡಿಯಲ್ಲಿ ನಲಿ–ಕಲಿ ತಟ್ಟೆಗಳ ವಿನ್ಯಾಸ:–



ಗಣಿತ ವಿಷಯದಲ್ಲಿ ಶಿಕ್ಷಕರು 1 ನೇ ತಟ್ಟೆಯಲ್ಲಿ ಕುಳಿತು ಅನುಕೂಲಿಸುತ್ತಿರುವುದು ಮತ್ತು ಉಳಿದ ಮಕ್ಕಳು ಆಯಾ ತಟ್ಟೆಯಲ್ಲಿ ಕುಳಿತು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿರುವುದು.

ಶಿಕ್ಷಕರು ಮಕ್ಕಳಿಗೆ ಅಭಿನಯ ಗೀತೆ ಹೇಳಿಕೊಡುವುದರಲ್ಲಿ ತೊಡಗಿರುವುದು.






ನಲಿ–ಕಲಿ ಕೊಠಡಿಯಲ್ಲಿ ನಲಿ–ಕಲಿ ಕಲಿಕಾ ಸಾಮಾಗ್ರಿಗಳ ಮತ್ತು ರ್‍ಯಾಕ್ ಜೋಡಣೆ.













॥ ಶ್ರೀ ಗುರುದೇವೋ ಭವ ॥
SHOT ON REDMI 7


॥ ಶ್ರೀ ಗುರುದೇವೋ ಭವ ॥
SHOT ON REDMI 7
AI DUAL CAMERA